ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 15 ನೇ ಡಿಸೆಂಬರ್, 2020

ಪುರಸಭೆ ಮತ್ತು ನಗರಸಭೆ ವ್ಯಾಪ್ತಿಗೆ ಒಳಪಡುವ ಆಸ್ತಿಯ ಕುರಿತು

ಶ್ರೀ ಎಂ. ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

693 (845) ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪೌರಾಡಳಿತ ಇಲಾಖೆ ವತಿಯಿಂದ ರಾಜ್ಯದ ಪುರಸಭೆ ಮತ್ತು ನಗರಸಭೆಗಳ ವ್ಯಾಪ್ತಿಗೆ ಒಳಪಡುವ ಆಸ್ತಿಗಳನ್ನು ಜಿ. ಐ. ಎಸ್. ತಂತ್ರಾಂಶದಡಿ ಮಾಹಿತಿಯನ್ನು ಕ್ರೋಢೀಕರಿಸುವ ಯೋಜನೆಗೆ ಸರ್ಕಾರವು ಅನುಮೋದನೆ ನೀಡಿದೆಯೇ;

(ಆ) ನೀಡಿದ್ದಲ್ಲಿ, ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು; (ಯೋಜನೆಯ ಪೂರ್ಣ ವಿವರ ಒದಗಿಸುವುದು)

(ಇ) ಈ ಕಾರ್ಯಕ್ಕಾಗಿ ಒಟ್ಟು ಎಷ್ಟು ಮೊತ್ತ ಮೀಸಲಿಡಲಾಗಿದೆ;

(ಈ) ರಾಜ್ಯದ ಪುರಸಭೆ ಮತ್ತು ನಗರಸಭೆ ವ್ಯಾಪ್ತಿಗೆ ಒಳಪಡುವ ಆಸ್ತಿಗಳನ್ನು ಈಗಾಗಲೇ ಗುರುತಿಸಲಾಗಿದೆಯೇ; ಗುರುತಿಸಿದ್ದಲ್ಲಿ, ನಗರಸಭೆ ಮತ್ತು ಪುರಸಭೆವಾರು ಮಾಹಿತಿ ನೀಡುವುದು;

(ಉ) ಪುರಸಭೆ ಮತ್ತು ನಗರಸಭೆ ವ್ಯಾಪ್ತಿಗೆ ಒಳಪಡುವ ಆಸ್ತಿಗಳನ್ನು ಯಾವ ರೀತಿ ವಿಂಗಡಿಸಲಾಗಿದೆ? (ವಾಣಿಜ್ಯ, ವಸತಿ ಮತ್ತು ಇತರೆ ವಿಂಗಡಣೆಯ ಪೂರ್ಣ ವಿವರ ನೀಡುವುದು)